ಇ) ೧೯೮೪ರ ಅಂತ್ಯದೊಳಗೆ ಪ್ರಸಾರ ಕಾರ್ಯ ಪ್ರಾರಂಭವಾಗುವುದೆಂದು ತಿಳಿದು ಬಂದಿದೆ.

ಕೋಲಾರ ಜಿಲ್ಲೆಯಲ್ಲಿರುವ ಚಲನಚಿತ್ರ ಮಂದಿರಗಳು.

೧೩೧೬. ಶ್ರೀ ಎ. ನಾಗರಾಜು (ಮಾಲೂರು) ಮಾನ್ಯ ವಾರ್ತಾ ಹಾಗೂ ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ಸಂಚಾರಿ ಸಿನಿಮಾ ಮಂದಿರಗಳು ಸೇರಿದಂತೆ ಇರುವ ಒಟ್ಟು ಸಿನಿಮಾ ಥಿಯೇಟರ್‌ಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಸಂಖ್ಯೆಯ ಮಾಹಿತಿಯನ್ನು ಒದಗಿಸುವುದು).

ಆ) ಈ ಜಿಲ್ಲೆಯಲ್ಲಿರುವ ಎಷ್ಟು ಥಿಯೇಟರ್‌ಗಳ ಸಂಖ್ಯೆ ಎಷ್ಟು ! (ತಾಲ್ಲೂಕುವಾರು ಸಂಖ್ಯೆಯ ಮಾಹಿತಿಯನ್ನು ಒದಗಿಸುವುದು).

ಇ) ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮವು ಯಾವಾಗಲಾದರೂ ಈ ಜಿಲ್ಲೆಯಲ್ಲಿ ಎಷ್ಟು ಥಿಯೇಟರ್‌ಗಳನ್ನು ಕಟ್ಟಲು ಸಾಲದ ಸೌಲಭ್ಯ ಕೊಟ್ಟಿದ್ದಾರೆಯೇ ?

ಈ) ಕೊಟ್ಟಿದ್ದರೆ ವಿವರವಾಗಿ ತಿಳಿಸಿ?

ಶ್ರೀ ಎಂ. ರಘುಪತಿ (ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಸಚಿವರು).—

ಅ) ಕೋಲಾರ ಜಿಲ್ಲೆಯಲ್ಲಿ ಸಂಚಾರಿ ಸಿನಿಮಾ ಮಂದಿರಗಳು ಸೇರಿದಂತೆ, ಒಟ್ಟು ಇರುವ ಸಿನಿಮಾಥಿಯೇಟರ್‌ಗಳ ಸಂಖ್ಯೆ ಈ ಕೆಳಕಂಡಂತಿವೆ.

ಕ್ರ. ಸಂಖ್ಯೆ	ತಾಲ್ಲೂಕು	ಸಂಖ್ಯೆ
೧)	ಬಾಗೇವಲ್ಲಿ	೯
೨)	ಬಂಗಾರಪೇಟೆ	೧೨
೩)	ಚಿಕ್ಕಬಳ್ಳಾಪುರ	೫
೪)	ಚಿಂತಾಮಣಿ	೬
೫)	ಗೌರಿಬಿದನೂರು	೧೧
೬)	ಗಂಡಿಬಂಡೆ	೩
೭)	ಕೋಲಾರ	೧೧
೮)	ಮಾಲೂರು	೬
೯)	ಮುಳಬಾಗಿಲು	೪
೧೦)	ಶಿಡ್ಲಘಟ್ಟ	೮
೧೧)	ಶ್ರೀನಿವಾಸಪುರ	೭
		೮೨

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಗೊಂಡ ಕಾಂಟ್ರಾಕ್ಟ್ ಕ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದ ನೌಕರರು

೧೪೪೧. ಶ್ರೀ ಎ, ರುಕ್ಕಯ್ಯ, ಪೂಜಾರಿ (ವಿಟ್ಲ) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಖಾಸಗಿ ಬಸ್ಸುಗಳ ರಾಷ್ಟ್ರೀಕರಣದಿಂದಾಗಿ ಕೆಲಸ ಕಳೆದುಕೊಂಡಿದ್ದ ಒಂದು ಸಾವಿರದ ಆರು ಕಾಂಟ್ರಾಕ್ಟ್ ಕ್ಯಾರೇಜ್ ನೌಕರರನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕ ಮಾಡಿಕೊಳ್ಳುವಂತೆ ಸರ್ವೋಚ್ಚ ನ್ಯಾಯಾಲಯದವರು ಕಾಯ್ದೆ ತಿದ್ದುಪಡಿ ಮಾಡಿರುವುದು ನಿಜವೆ.

೪) ಹಾಗಿದ್ದಲ್ಲಿ ನೌಕರರನ್ನು ಈವರೆಗೆ ಮುಂದುವರಿಸಿಕೊಳ್ಳದಿರಲು ಕಾರಣಗಳೇನು ?

೫) ಸದರಿ ನೌಕರರನ್ನು ಕೂಡಲೆ ನೇಮಕ ಮಾಡಿಕೊಳ್ಳಲಾಗುವುದೇ ?

ಶ್ರೀ ಎಂ. ಪಿ. ಪ್ರಕಾಶ್, (ಸಾರಿಗೆ ರಾಜ್ಯ ಸಚಿವರು),—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನೇಮಕಾತಿ ನಿಯಮಾವಳಿಗಳನ್ನು ತೊಂದರೆಗೀಡಾದ ಒಂದು ವರ್ಗದ ಜನರಿಗೆ ನೇಮಕಾತಿಗಳನ್ನು ಪರಿಶೀಲಿಸಲು ಅನುಕೂಲವಾಗಲು ತಿದ್ದುಪಡಿ ಮಾಡಲಾಗಿದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಈಗಾಗಲೇ ನೇಮಕಾತಿಯ ಬಗ್ಗೆ ಆದೇಶವನ್ನು ಹೊರಡಿಸಿದೆ.

ಇ) ಆ ಪ್ರಶ್ನೆಗೆ ಕೊಟ್ಟ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಹಂಡ್ಕೊ ಹಾಗೂ ಜನತಾ ಯೋಜನೆಗಳು.

೧೪೫೫ ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) —ವಸತಿ ಕಾರ್ಯದರ್ಶಿಗಳು ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೨–೮೩ ಹಾಗೂ ೧೯೮೩–೮೪ನೇ ಸಾಲುಗಳಲ್ಲಿ ಮಂಜೂರಾದ ಹಂಡ್ಕೋ ಹಾಗೂ ಜನತಾ ಮನೆಗಳ ಸಂಖ್ಯೆ ಎಷ್ಟು ? (ಕ್ಷೇತ್ರವಾರು ವಿವರಗಳನ್ನು ಒದಗಿಸುವುದು).

ಶ್ರೀ ಎಂ. ಚಂದ್ರಶೇಖರ್ (ವಸತಿ ಮಂತ್ರಿಗಳು).—

ಅ) ೧೯೮೨–೮೩ರಲ್ಲಿ ಸರಕಾರವು ೪೫೦೦ ಮನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರು ಮಾಡಿತು. ಈ ಮನೆಗಳನ್ನು ೮೨–೮೩ರಲ್ಲಿ ಆಯವ್ಯಯ ಪಟ್ಟಿಯಲ್ಲಿ ಹಣ ಇಲ್ಲದಿದ್ದ ಕಾರಣ ಕಟ್ಟಲು ತೆಗೆದುಕೊಳ್ಳಲಿಲ್ಲ. ಆದರೆ ೮೩–೮೪ರಲ್ಲಿ ಮೇಲ್ಕಂಡ ಮನೆಗಳ ಪೈಕಿ ೨೧೮೫ ಮನೆಗಳನ್ನು ಕಟ್ಟಲು ತೆಗೆದುಕೊಳ್ಳಲಾಯಿತು. (ಕ್ಷೇತ್ರವಾರು ಪಟ್ಟಿಯನ್ನು ಅನುಬಂಧ—'ಅ' ದಲ್ಲಿ ತೋರಿಸಲಾಗಿದೆ)

ANNEXURE – A

Statement showing the number of Houses sanctioned during 1982-83 and taken up for construction durlng 1983-84 in Dakshina Kannada Distsict Constituency-wise details.

Sl. No.	Name of the Assembly Constiuaney	Houses taken up during 1983–84 out of 4,500 houses sanctioned during 1982-83	
		HUDCO Assisted P.H,S.	Janatha (ELCHS)
1.	Kundapur	—	—
2.	Baindur	—	—
3.	Udupi	—	146
4.	Kaup	14	2
5.	Brahmavar	—	4
6.	Karkal	126	47
7.	Moodabidri	96	52